ಕಾವೇರಿ ಜಲಾನಯನದಲ್ಲಾಗಿದೆ, ಅದೇ ರೀತಿ ಇದನ್ನೂ ಕೂಡ BOOT system ನಲ್ಲಿ ಕೊಡಬೇಕೆನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಆ detailed project report ಬಂದ ಮೇಲೆ ಅದಕ್ಕೆ ಏನೇನು conditions ಹಾಕಬೇಕೋ ಎಂದು ತೀರ್ಮಾನ ಮಾಡಿ ಒಂದು ತಿಂಗಳಲ್ಲಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: Sufficient ಆಗಿ ಹೇಳಿದ್ದಾರೆ. ಈಗ ಬೊಮ್ಮಾಯಿಯವರು ನೀರಾವರಿ ಖಾತೆಯ ಸಚಿವರಾಗಿದ್ದಾರೆ. ಈಗ ನೀವು ಅದನ್ನು ಮಾಡಿಸಿಕೊಂಡುಬಿಡಿ.

ಶ್ರೀ ಹೆಚ್.ಡಿ. ರೇವಣ್ಣ: ಹಾರಂಗಿ, ಹೇಮಾವತಿ ನದಿಗೆ ಸಂಬಂಧಿಸಿದಂತೆ ಯಾವಾಗ ಮಾಡುತ್ತೀರಿ ಎನ್ನುವುದನ್ನು ದಯಮಾಡಿ ಹೇಳಬೇಕು.

<u>ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆಗಳ ಸಂಖ್ಯೆ</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	114(499)
ಸದಸ್ಯರ ಹೆಸರು	:	ಶ್ರೀ. ಕೃಷ್ಣಮೂರ್ತಿ ಕೆ.ಎಂ. (ಕಡೂರು)
ವಿಷಯ	:	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಹೊಸದಾಗಿ ಪ್ರಾರಂಭಿಸಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಆಶ್ರಮ ಶಾಲೆಗಳಿಗೆ ಬೋಧಕ/ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡುವ ಬಗ್ಗೆ.
ಉತ್ತರಿಸುವ ಸಚಿವರು	:	ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆಗಳ ಸಂಖ್ಯೆ ಎಷ್ಟು

ಅಲೆಮಾರಿ/ ಅರೆ ಅಲೆಮಾರಿ ಜನಾಂಗದವರಿಗಾಗಿ 04 ಆಶ್ರಮ ಶಾಲೆಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ. ಅವುಗಳಲ್ಲಿ 02 ಆಶ್ರಮ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

ಆ ಎಲ್ಲಾ ಆಶ್ರಮ ಶಾಲೆಗಳಲ್ಲಿ ಶಿಕ್ಷಕರು ಹಾಗೂ ಅಡುಗೆಯವರು ಇದ್ದಾರೆಯೇ:

ಹೊಸದಾಗಿ ಮಂಜೂರಾಗಿರುವ 04 ಶಾಲೆಗಳಿಗೆ ಬೋಧಕ/ ಬೋಧಕೇತರ ಹುದ್ದೆಗಳು ಇನ್ನೂ ಮಂಜೂರಾಗಿರುವುದಿಲ್ಲ. ಹಿಂದುಳಿದ ವರ್ಗಗಳ ಇಲಾಖೆಯ ಸಿಬ್ಬಂದಿಯಿಂದ ಈ ಶಾಲೆಗಳಿಗೆ ಹುದ್ದೆಗಳನ್ನು ಪ್ರಭಾರ ವ್ಯವಸ್ಥೆಯ ಮೂಲಕ ತಾತ್ಕಾಲಿಕವಾಗಿ ತುಂಬಲಾಗಿದೆ.

ಇ ಈ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆಎಷ್ಟು; ಯಾವ ದಿನಾಂಕದಿಂದ ಈ ಹುದ್ದೆಗಳು ಖಾಲಿ ಇವೆ (ವಿವರ ನೀಡುವುದು):

ಬೋಧಕ ಶಿಕ್ಷಕರ ಹುದ್ದೆಗಳು ಇನ್ನೂ ಮಂಜೂರಾಗಿರುವುದಿಲ್ಲ. ಆದುದರಿಂದ ಯಾವ ದಿನಾಂಕದಿಂದ ಹುದ್ದೆಗಳು ಖಾಲಿ ಇವೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ಈ ಆಶ್ರಮ ಶಾಲೆಗಳಲ್ಲಿಯೂ ಅಡಿಗೆ ಸಿಬ್ಬಂದಿಯವರ ಕೊರತೆಯಿರುವುದು ನಿಜವೆ; ಹಾಗಿದ್ದಲ್ಲಿ, ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಹುದ್ದೆಗಳ ಮಂಜೂರಾತಿ ಪ್ರಸ್ತಾವನೆಯ ಪರಿಶೀಲನೆಯಲ್ಲಿದೆ. ಹುದ್ದೆಗಳ ಮಂಜೂರಾತಿ ಆದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಪ್ರಸ್ತುತ ಹಿಂದುಳಿದ ವರ್ಗಗಳ ಇಲಾಖೆಯಿಂದ ಹುದ್ದೆಗಳನ್ನು ಪ್ರಭಾರದಲ್ಲಿರಿಸಲಾಗಿದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಹಿಂದುಳಿದ ಇಲಾಖೆಯಲ್ಲಿ ಅಲೆಮಾರಿ ಜನಾಂಗದ ಆಶ್ರಮ ಶಾಲೆ ಎಷ್ಟಿದೆ ಎಂದು ಕೇಳಿದ್ದಕ್ಕೆ 4 ಮಂಜೂರು ಆಗಿವೆ, 2 ಆಶ್ರಮ ಶಾಲೆ ಪ್ರಾರಂಭವಾಗಿದೆ ಎಂದು ಉತ್ತರಿಸಿದ್ದಾರೆ. ಆ 2 ಆಶ್ರಮ ಶಾಲೆಗಳು ಯಾವುದು ಎನ್ನುವುದನ್ನು ಇಲಾಖೆಯವರು ಸರಿಯಾಗಿ ಹೇಳಲಿಲ್ಲ. ಆ ಎರಡು ಶಾಲೆಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? 2008–09ನೇ ಸಾಲಿನಲ್ಲಿ ಏನಾದರೂ ಪ್ರಾರಂಭ ಮಾಡುತ್ತೀರಾ? ಆ ಆಶ್ರಮ ಶಾಲೆಗಳನ್ನು ಜಾಸ್ತಿ ಏಕೆ ಮಾಡಬೇಕೆಂದರೆ, ಧಾರವಾಡ, ಹುಬ್ಬಳ್ಳಿ, ಬೆಳಗಾಂ, ದಾವಣಗೆರೆ, ಬಳ್ಳಾರಿ ಜಿಲ್ಲೆಯಿಂದ ಚಿಕ್ಕಮಗಳೂರಿಗೆ ಕೂಲಿ ಕೆಲಸಕ್ಕೆ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ/ ಪಂಗಡದವರು ಬರುತ್ತಾರೆ. ಚಿಕ್ಕಮಗಳೂರಿನಲ್ಲಿ, ಕಡೂರಿನಲ್ಲಿ ಹೆಚ್ಚು ಆಶ್ರಮ ಶಾಲೆಗಳನ್ನು ತೆರೆದರೆ ಒಳ್ಳೆಯದು. ಎಲ್ಲಾ ಆಶ್ರಮ ಶಾಲೆಗಳಲ್ಲಿ ಶಿಕ್ಷಕರು ಹಾಗೂ ಅಡಿಗೆಯವರು ಇದ್ದಾರೆಯೇ ಎಂದು ಕೇಳಿದ್ದಕ್ಕೆ ಬೋಧಕ/ ಬೋಧಕೇತರ ಹುದ್ದೆಗಳು ಇನ್ನೂ ಮಂಜೂರಾಗಿರುವುದಿಲ್ಲ, ಪ್ರಭಾರ ವ್ಯವಸ್ಥೆ ಮೂಲಕ

ತಾತ್ಕಾಲಿಕವಾಗಿ ಭರ್ತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಇದನ್ನು ಏತಕ್ಕೋಸ್ಕರ ಇಷ್ಟು ದಿವಸವಾದರೂ ತುಂಬಿಲ್ಲ? ಆ ಶಾಲೆಗಳಲ್ಲಿರುವ ಖಾಲಿ ಇರುವ ಶಿಕ್ಷಕರ ಹುದ್ದೆಗಳು ಮಂಜೂರಾಗಿವೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ, ಈ ಪ್ರಶ್ನೆಗೆ ಉತ್ತರಗಳು ಸಮಂಜಸವಾಗಿಲ್ಲ. ಏನೋ ಪ್ರಶ್ನೋತ್ತರ ವೇಳೆಯಲ್ಲಿ ತಾವು ಕೂಡ ಅಧ್ಯಕ್ಷರು ಅದನ್ನು ಓಡಿಸಿಕೊಂಡು ಹೋಗುವುದರಿಂದ ಇಲಾಖೆಯ ಅಧಿಕಾರಿಗಳು ಬಹಳ ಕೆಟ್ಟದಾಗಿ.

ಅಧ್ಯಕ್ಷರು: ಕೃಷ್ಣಮೂರ್ತಿಯವರೆ, ಅಧ್ಯಕ್ಷರ ಮೇಲೆ ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾನು ಅಧ್ಯಕ್ಷರ ಮೇಲೆ ಆರೋಪ ಮಾಡುತ್ತಿಲ್ಲ.

ಅಧ್ಯಕ್ಷರು: No, no. ನಾನು ಓಡಿಸಿಕೊಂಡು ಹೋಗುತ್ತಿಲ್ಲ. ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಈ ರೀತಿ ನೀವು ಗಂಭೀರವಾಗಿ ಹೇಳುವುದು ಸರಿಯಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನೀವು one hour fix ಮಾಡಿ.

ಅಧ್ಯಕ್ಷರು: ಹೌದು, one hour ನಲ್ಲಿ ಎಷ್ಟು ಆಗುತ್ತದೆಯೋ ಅಷ್ಟು, ಎಲ್ಲರಿಗೂ ಅವಕಾಶವಾಗುವುದಿಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಪ್ರಶ್ನೆಗೆ ಉತ್ತರ ಸರಿಯಾಗಿಲ್ಲದಿದ್ದರೆ (ಗೊಂದಲ) ನಾವು ಪ್ರಶ್ನೆ ಕೇಳಿದರೆ ವಿಧಾನಸಭೆಯಲ್ಲಿ.... (ಗೊಂದಲ).

ಅಧ್ಯಕ್ಷರು: ನೀವು ಈ ರೀತಿ ಆಪಾದನೆ ಮಾಡಿದ್ದು ಸರಿಯಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾನು ಆಪಾದನೆ ಮಾಡುತ್ತಿಲ್ಲ. (ಗೊಂದಲ) ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಉತ್ತರವೇ?

ಅಧ್ಯಕ್ಷರು: No, no, no. ಈ ರೀತಿ ಓಡಿಸಿಕೊಂಡು ಹೋಗುವುದು ಎಂದು ಹೇಳುವುದು ಸರಿಯಲ್ಲ. ನೋಡಿ, ಸಭಾಧ್ಯಕ್ಷರ ಬಗ್ಗೆ ಹಗುರವಾಗಿ ಮಾತನಾಡುವ ಹಾಗಿಲ್ಲ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾನು ಹಗುರವಾಗಿ ಮಾತನಾಡಲಿಲ್ಲ.

ಅಧ್ಯಕ್ಷರು: ನಾನು Discipline maintain ಮಾಡುತ್ತಿದ್ದೇನೆ. ನೀವು ಈ ರೀತಿ ಆಗಾಗ್ಗೆ ಮಾತನಾಡುತ್ತೀರಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ತಾವು emotional ಆಗಬಾರದು.

ಅಧ್ಯಕ್ಷರು: ಇದು emotional ಅಲ್ಲ. ನೀವು ಈ ರೀತಿ ಸಭಾಧ್ಯಕ್ಷರ ಸ್ಥಾನದ ಬಗ್ಗೆ ಹಗುರವಾಗಿ ಮಾತನಾಡಬಾರದು ನೀವು ಈ ರೀತಿ ಆಗಾಗ್ಗೆ ಮಾತನಾಡುತ್ತೀರಿ. ನೀವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಸ್ವಲ್ಪ hour ಜಾಸ್ತಿ ಮಾಡಿ. ಪ್ರಶ್ನೆಗಳಿಗೆ ಸರಿಯಾದ ಉತ್ತರವಿಲ್ಲದಿದ್ದರೆ ಸರಿಯಾಗಿ ಉತ್ತರ ಕೊಡಿ ಎಂದು ಹೇಳಿ.

ಅಧ್ಯಕ್ಷರು: ಪ್ರಶ್ನೆ ಕೇಳುವುದು ಬಿಟ್ಟು subject ಬಿಟ್ಟು ಬೇರೆ ವಿಚಾರಕ್ಕೆ ನೀವು ಹೋಗುತ್ತೀರಿ? ಏನಿದು? ಪ್ರಶ್ನೆ ಕೇಳಿ. ಅವಕಾಶ ಕೊಟ್ಟಿಲ್ಲವೇ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಸರಿಯಾದ ಉತ್ತರ ನನಗೆ ಸಿಗದಿರುವುದರಿಂದ ಮಾನ್ಯ ಮಂತ್ರಿಯವರು ಇದರ ಬಗ್ಗೆ ಪೂರ್ಣ ವಿಚಾರವನ್ನು ನನಗೆ ಸಭೆಯ ಮುಖಾಂತರ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಸುಧಾಕರ: ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಕಳೆದ ಆಯವ್ಯಯದಲ್ಲಿ ಪ್ರಸ್ತಾಪಿಸಿ ಅನುಷ್ಠಾನಗೊಳಿಸಲಾಗಿದೆ. 2007–08ನೇ ಸಾಲಿನಿಂದ ಮಾತ್ರ ಇದು ಅನುಷ್ಠಾನಕ್ಕೆ ಬರುತ್ತಿರುವುದು. 2007–08ನೇ ಸಾಲಿನಲ್ಲಿ 4 ಕಡೆ ಆಶ್ರಮ ಶಾಲೆಗಳನ್ನು ಅಲೆಮಾರಿ ಜನಾಂಗಕ್ಕೆ ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ತುಮಕೂರು, ಬೆಳಗಾಂ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರಾರಂಭಿಸಬೇಕೆಂದಾಗ, ಗುಲ್ಬರ್ಗಾ ಮತ್ತು ಬೆಳಗಾಂ ನಲ್ಲಿ ಮಾತ್ರ ಪ್ರವೇಶಕ್ಕೆ ಅರ್ಜಿಗಳು ಬಂದಿವೆ. ಅಲ್ಲಿ ನಮಗೆ Strength ಸಿಕ್ಕಿಲ್ಲ. ತುಮಕೂರಿನಲ್ಲೂ ಸಹ ತಾವು ಹೇಳಿದ ಹಾಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆ ಪ್ರಸ್ತಾವನೆ ಕಳೆದ ಸಾಲಿನಲ್ಲಿ ಇಲ್ಲ. ಇದನ್ನು ಬರುವಂಥ ಸಾಲಿನಲ್ಲಿ ತೆಗೆದುಕೊಂಡು, ಎಲ್ಲಿ ಅಲೆಮಾರಿ ಜನಾಂಗ ಹೆಚ್ಚು ಇದ್ದಾರೆ ಅಲ್ಲಿ ಪ್ರಾರಂಭಿಸಲಿಕ್ಕೆ ನಾನು ಪ್ರಯತ್ನಿಸುತ್ತೇನೆಂದು ಹೇಳುತ್ತಾ, ತಾವು ಕೇಳಿರುವುದು 2007–08ನೇ ಸಾಲಿನಲ್ಲಿ ಅಗಿರುವುದರಿಂದ ಈ ಹುದ್ದೆಗಳ ಬಗ್ಗೆ ಪ್ರಸ್ತಾವನೆಯು ಈಗಾಗಲೇ ಆರ್ಥಿಕ ಇಲಾಖೆಯ ಮುಂದಿದೆ. ಈ ಸಾಲಿನಲ್ಲಿ ಅದಕ್ಕೆ ಮಂಜೂರಾತಿ ಪಡೆದು, ತುಂಬುವಂಥ ಕೆಲಸ ಇದೇ ಸಾಲಿನಲ್ಲಿ ಮಾಡುತ್ತೇನೆಂದು ತಮಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಇನ್ನೂ ಎಷ್ಟು ವರ್ಷ ಬೇಕು? ಆರ್ಥಿಕ ಇಲಾಖೆಯಲ್ಲಿ ಏಕೆ ತಡೆಯಾಯಿತು? ಯಾವಾಗ ಅಡಿಗೆಯವರು, ಬೋಧಕರನ್ನು, ಶಿಕ್ಷಕರನ್ನು ನೇಮಿಸುತ್ತೀರಿ? ಏತಕ್ಕಾಗಿ ಎಷ್ಟು ದಿವಸವಾದರೂ ಮಾಡಲಿಲ್ಲ? ಎಷ್ಟು ಜನ ವಲಸೆ ಹೋಗುತ್ತಾರೆಂದು ಇಲಾಖೆಯ ವತಿಯಿಂದ ಏನಾದರೂ ಸರ್ವೆ ಮಾಡಿಸಿದ್ದೀರಾ? ಹೆಚ್ಚು ಕಡಿಮೆ 40 ರಿಂದ 50 ಸಾವಿರ ಜನ ಚಿಕ್ಕಮಗಳೂರು ಜಿಲ್ಲೆಗೆ ರಾಯಚೂರು, ಗುಲ್ಬರ್ಗಾ ಈ ಭಾಗದಿಂದ ಕೆಲಸ ಮಾಡಲಿಕ್ಕೆ ವಲಸೆ ಬರುತ್ತಿದ್ದಾರೆ. ಆದುದರಿಂದ, ಯಾವಾಗ ಈ ಬೋಧಕರನ್ನು ನೇಮಕಾತಿ ಮಾಡುತ್ತೀರಿ? ಅದಕ್ಕೆ ಆರ್ಥಿಕ ಇಲಾಖೆ ಯಾವಾಗ ಅನುಮತಿ ಕೊಡುತ್ತದೆ?

ಯಾವಾಗ ಅಡಿಗೆಯವರನ್ನು ನೇಮಕ ಮಾಡುತ್ತೀರಿ? ಅಲ್ಲಿ ಗುತ್ತಿಗೆಯಾಧಾರದ ಮೇಲೆ ಕೆಲಸ ಮಾಡುತ್ತಿರುವವರು ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಡಿ. ಸುಧಾಕರ: ತಮಗೆ ಈಗಾಗಲೇ ತಿಳಿಸಿದ ಹಾಗೆ ಆರ್ಥಿಕ ಇಲಾಖೆಗೆ ಮಂಜೂರಾತಿಗಾಗಿ ಹೋಗಿರುವುದರಿಂದ ಇದೇ ಸಾಲಿನಲ್ಲಿ ಮಂಜೂರಾತಿ ಪಡೆದುಕೊಂಡು ತುಂಬಿಸುವ ಕೆಲಸ ನಾವು ಮಾಡುತ್ತೇವೆ.

ಗಾರ್ಮೆಂಟ್ ನೌಕರರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**120(512)**
ಸದಸ್ಯರ ಹೆಸರು	:	**ಶ್ರೀ. ನರೇಂದ್ರಬಾಬು ಎನ್.ಎಲ್. (ಮಹಾಲಕ್ಷ್ಮಿ ಲೇಔಟ್)**
ಉತ್ತರಿಸಬೇಕಾದ ಸಚಿವರು	:	**ಶ್ರೀ ಬಚ್ಚೇಗೌಡ ಬಿ.ಎನ್. (ಕಾರ್ಮಿಕ ಸಚಿವರು)**

ಅ) ರಾಜ್ಯದ ಮತ್ತು ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿರುವ ಗಾರ್ಮೆಂಟ್ಸ್ ನೌಕರರ ಸಂಖ್ಯೆ ಎಷ್ಟು; (ವಿವರ ನೀಡುವುದು),

30-6-2008ರಂದು ರಾಜ್ಯದಲ್ಲಿರುವ ಒಟ್ಟು 920 ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕ ವಿವರ ಈ ಕೆಳಕಂಡಂತಿದೆ.

ಒಟ್ಟು ಕಾರ್ಮಿಕರ ಸಂಖ್ಯೆ- 3,62,249

ಪುರುಷ ಕಾರ್ಮಿಕರ ಸಂಖ್ಯೆ-1,25,478

ಮಹಿಳಾ ಕಾರ್ಮಿಕರ ಸಂಖ್ಯೆ-2,36,771

ಬೆಂಗಳೂರು ನಗರದಲ್ಲಿರುವ 910 ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ವಿವರ ಈ ಕೆಳಕಂಡಂತಿದೆ.

ಒಟ್ಟು ಕಾರ್ಮಿಕರ ಸಂಖ್ಯೆ-3,55,806

ಪುರುಷ ಕಾರ್ಮಿಕರ ಸಂಖ್ಯೆ-1,23,362

ಮಹಿಳಾ ಕಾರ್ಮಿಕರ ಸಂಖ್ಯೆ-2,32,444

ಆ) ಈ ಕಾರ್ಮಿಕರ ಹಿತ ಕಾಪಾಡಲು ಆರೋಗ್ಯ ಮತ್ತು ಉದ್ಯೋಗ ರಕ್ಷಣೆ ನೀಡಲು ಸರ್ಕಾರದ ಕ್ರಮಗಳೇನು;

ಕಾರ್ಮಿಕರ ಹಿತ ಕಾಪಾಡಲು ಆರೋಗ್ಯ ಮತ್ತು ಉದ್ಯೋಗ ರಕ್ಷಣೆ ನೀಡಲು ಈ ಕೆಳಗಿನ ಕ್ರಮಗಳು ಜಾರಿಯಲ್ಲಿರುತ್ತವೆ.

1) ಕಾರ್ಮಿಕರ ಸಂಖ್ಯೆ 500 ಕ್ಕಿಂತ ಹೆಚ್ಚಿರುವ ಕಾರ್ಖಾನೆಗಳಲ್ಲಿ ಒಬ್ಬರು ವೈದ್ಯರನ್ನು ನೇಮಿಸಿಕೊಳ್ಳುವುದು ಕಡ್ಡಾಯವಾಗಿದೆ.